154-68

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಪ್ರಶ್ನೆಗೆ ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖಾ ಸಚಿವರ ಉತ್ತರ.

*****

ವಿಷಯ

ಆಹಾರ ನಿಗಮದ ಗೋದಾಮಿನ ನಿರ್ವಹಣೆಗೆ ಮಾರ್ಗಸೂಚಿ ರೂಪಿಸಿ ನ್ಯಾಯಬೆಲೆ ಅಂಗಡಿಗಳನ್ನು ನಿಯಮಿತ ತಪಾಸಣೆ ಮಾಡಿಸುವ ಬಗ್ಗೆ.

ಉತ್ತರ:-

ಸಾರ್ವಜನಿಕ ವಿತರಣಾ ಪದ್ಧತಿಯಡಿ ಆಹಾರಧಾನ್ಯಗಳ ಸ್ವೀಕೃತಿ, ಸಂಗ್ರಹಣೆ ಮತ್ತು ವಿತರಣೆ ಮಾಡುವ ಸಮಯದಲ್ಲಿ ಪಡಿತರ ಆಹಾರಧಾನ್ಯಗಳು ಕಾಳಸಂತೆಗೆ ಹೋಗುವುದನ್ನು ತಡೆಗಟ್ಟಿ ರಾಷ್ಟ್ರೀಯ ಆಹಾರ ಭದ್ರತೆ-ಕಾಯ್ದೆ-2013 ನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಕುರಿತು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ ಇವರ ದಿನಾಂಕ **04.03.2025** ರ ಸುತ್ತೋಲೆಯಲ್ಲಿ ವಿವರವಾದ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಪ್ರತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಇ-ಆನಾಸ **46** ಆರ್‌ಪಿಆರ್ **2025**

(ಕೆ.ಹೆಚ್ ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು
ಮಾಪನಶಾಸ್ತ್ರ ಇಲಾಖಾ ಸಚಿವರು

ಅನುಬಂಧ

Ph.080-2209 6555 / 2209 6512
E-mail: kfcscproc123@yahoo.com

# ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ

**Karnataka Food & Civil Supplies Corporation Ltd.**
**(Government of Karnataka Undertaking)**

ನಂ. 16/ಐ. ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು- 560 052
No.16 / I, MILLERS TANK BED AREA, BANGALORE-560 052

ಸಂಖ್ಯೆ: ಕಆನಾಸನಿನಿ/ಸಂ/09/2024-25/2639 ದಿನಾಂಕ 04.03.2025

## ಸುತ್ತೋಲೆ

ವಿಷಯ: ಸಗಟು ಮಳಿಗೆಗಳಲ್ಲಿ ದಾಸ್ತಾನು ಸ್ವೀಕೃತಿ, ಸಂಗ್ರಹಣೆ ಮತ್ತು ವಿತರಣೆ ಮಾಡುವ ಬಗ್ಗೆ ಮಾರ್ಗಸೂಚಿಗಳು.

*-*-*-*-*-*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ವಿತರಣಾ ಪದ್ಧತಿಯಡಿ ಆಹಾರಧಾನ್ಯಗಳ ಸ್ವೀಕೃತಿ, ಸಂಗ್ರಹಣೆ ಮತ್ತು ವಿತರಣೆ ಮಾಡುವ ಸಮಯದಲ್ಲಿ ಪಡಿತರ ಆಹಾರಧಾನ್ಯಗಳು ಕಾಳಸಂತೆಗೆ ಹೋಗುವುದನ್ನು ತಡೆಗಟ್ಟಿ ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಈ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸುವುದು.

1. ಪ್ರತಿ ಮಾಹೆ ಮುಂಗಡವಾಗಿ ಹಂಚಿಕೆಯಾಗುವ ಆಹಾರಧಾನ್ಯಗಳನ್ನು ಕಡ್ಡಾಯವಾಗಿ ಹಿಂದಿನ ಮಾಹೆಯ ಅಂತ್ಯದೊಳಗೆ ಭಾರತ ಆಹಾರ ನಿಗಮದಿಂದ ಅಧಿಕೃತ ಸಾಗಾಣಿಕೆದಾರರ ಮೂಲಕ ಎತ್ತುವಳಿ ಮಾಡಿ ಸಗಟು ಮಳಿಗೆಗಳಲ್ಲಿ ದಾಸ್ತಾನೀಕರಿಸಲು ಸಾಗಾಣಿಕಾ ಗುತ್ತಿಗೆದಾರರೊಂದಿಗೆ ಸಮನ್ವಯ ಸಾಧಿಸಿಕೊಳ್ಳುವುದು.
2. ಸಗಟು ಮಳಿಗೆಗೆ ಬಂದ ದಾಸ್ತಾನನ್ನು ಕಡ್ಡಾಯವಾಗಿ ತೂಕ ಮಾಡಿ ಮತ್ತು ಚೀಲಗಳ ಸಂಖ್ಯೆಯನ್ನು ಖಚಿತ ಪಡಿಸಿಕೊಂಡು ನಂತರ ಫಿಸ್ಟ್ ತಂತ್ರಾಂಶದಲ್ಲಿ ದಾಸ್ತಾನು ಸ್ವೀಕೃತಿ ಪಡೆಯುವುದು. ಒಂದು ವೇಳೆ ಆಹಾರಧಾನ್ಯಗಳ ಪ್ರಮಾಣದಲ್ಲಿ ವ್ಯತ್ಯಾಸ ಕಂಡು ಬಂದಲ್ಲಿ ಫಿಸ್ಟ್ ತಂತ್ರಾಂಶದಲ್ಲಿ ಸಾಗಾಣಿಕೆ ನಷ್ಟ ಎಂದು ನಮೂದು ಮಾಡಿ ನಿಖರವಾಗಿ ಗೋದಾಮಿಗೆ ಬಂದ ಪ್ರಮಾಣಕ್ಕೆ ದಾಸ್ತಾನು ಸ್ವೀಕೃತಿ ಪಡೆಯುವುದು.
3. ಸಗಟು ಸಾಗಾಣಿಕೆ ಗುತ್ತಿಗೆದಾರರು ಸಗಟು ಮಳಿಗೆಗೆ ಆಹಾರಧಾನ್ಯಗಳನ್ನು ಸಾಗಾಣಿಕೆ ಮಾಡಿದ ಪ್ರಮಾಣಕ್ಕೆ ಅನುಗುಣವಾಗಿ ಸಗಟು ಮಳಿಗೆಯಲ್ಲಿ ದಾಸ್ತಾನು ಸ್ವೀಕರಿಸಿರುವುದಕ್ಕೆ, ಕಡ್ಡಾಯವಾಗಿ ಸಗಟು ಮಳಿಗೆ ವ್ಯವಸ್ಥಾಪಕರ ಸಹಿಯೊಂದಿಗೆ ಅವರಿಂದ ಸೂಕ್ತ ಸ್ವೀಕೃತಿಯನ್ನು ಪಡೆಯುವುದು ಸಗಟು ಸಾಗಾಣಿಕೆ ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ. ಈ ರೀತಿ ಪಡೆದುಕೊಂಡ ದಾಸ್ತಾನು ಸ್ವೀಕೃತಿ ಪ್ರತಿಗಳನ್ನು ಸಾಗಾಣಿಕೆ ವೆಚ್ಚದ ಬಿಲ್ಲುಗಳೊಂದಿಗೆ ಕಡ್ಡಾಯವಾಗಿ ಲಗತ್ತಿಸಬೇಕು.
4. ಸಗಟು ಮಳಿಗೆಯಲ್ಲಿ ಸ್ವೀಕೃತಿ ಪಡೆದ ಪ್ರಮಾಣವನ್ನು ಎಣಿಕೆ ಮಾಡಲು ಅನುವಾಗುವಂತೆ ವೈಜ್ಞಾನಿಕವಾಗಿ ದಾಸ್ತಾನಿರಿಸಬೇಕು ಹಾಗೂ ಪ್ರತಿ ಲಾಟ್ ಮುಂಭಾಗದಲ್ಲಿ ದಾಸ್ತಾನಿನ ವಿವರಗಳುಳ್ಳ stock board ಅನ್ನು ಪ್ರದರ್ಶಿಸಬೇಕು ದಾಸ್ತಾನನ್ನು ವಿತರಣೆ ಮತ್ತು ಸ್ವೀಕೃತಿ ಪ್ರಮಾಣಕ್ಕೆ ಅನುಗುಣವಾಗಿ stock board ವಿವರಗಳನ್ನು ಬದಲಾವಣೆ ಮಾಡಬೇಕು.
5. ಸಗಟು ಮಳಿಗೆಗಳಲ್ಲಿ ಆಹಾರಧಾನ್ಯಗಳನ್ನು ಸಂಗ್ರಹಿಸಲು ಸ್ಥಳದ ಅಭಾವ ಇದ್ದಲ್ಲಿ ಜಿಲ್ಲಾ ವ್ಯವಸ್ಥಾಪಕರು ಹಾಗೂ ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸಿ ಆದ್ಯತೆಯ ಮೇರೆಗೆ ಜಿಲ್ಲೆಯಲ್ಲಿ ಲಭ್ಯವಿರುವ ವೈಜ್ಞಾನಿಕ ಗೋದಾಮುಗಳನ್ನು ಪಡೆದು ಆಹಾರಧಾನ್ಯಗಳನ್ನು ದಾಸ್ತಾನಿರಿಸಲು ಕ್ರಮವಹಿಸುವುದು.

Ph.080-2209 6555 / 2209 6512
E-mail: kfcscproc123@yahoo.com

# ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ
**Karnataka Food & Civil Supplies Corporation Ltd.**
**(Government of Karnataka Undertaking)**
ನಂ. 16/ಐ. ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು- 560 052
No.16 / I, MILLERS TANK BED AREA, BANGALORE-560 052

---



6. ಉತ್ತಮ ಗುಣಮಟ್ಟದ ಆಹಾರಧಾನ್ಯಗಳನ್ನು ಸರಬರಾಜು ಆಗುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳಲು ನಿಗಮದ ವತಿಯಿಂದ ಗುಣಮಟ್ಟ ನಿರೀಕ್ಷಕರನ್ನು ಭಾರತ ಆಹಾರ ನಿಗಮಕ್ಕೆ ನೇಮಿಸುವುದು. ಅಗತ್ಯವಿದ್ದಲ್ಲಿ ಜಂಟಿ/ ಉಪ ನಿರ್ದೇಶಕರು ಭಾರತ ಆಹಾರ ನಿಗಮದ ಗೋದಾಮುಗಳಿಗೆ ಭೇಟಿ ನೀಡಿ ಸಂಬಂಧಪಟ್ಟ ಎಫ್.ಸಿ.ಐ ಅಧಿಕಾರಿಗಳಿಗೆ ಅಗತ್ಯ ಸೂಚನೆಗಳನ್ನು ನೀಡುವಂತೆ ತಿಳಿಸುವುದು.
7. ಪ್ರತಿ ಮಾಹೆ ಆಹಾರಧಾನ್ಯಗಳ ಹಂಚಿಕೆಯನ್ನು ಮುಂಗಡವಾಗಿ ನೀಡಲು ಹಿಂದಿನ ಮಾಹೆಯ ವಿತರಣೆಯ ನಂತರ ಸಗಟುಮಳಿಗೆ ಮತ್ತು ನ್ಯಾಯಬೆಲೆ ಅಂಗಡಿಗಳಲ್ಲಿ ಶೀರ್ಷಿಕೆವಾರು ಉಳಿಯಾಗಿರುವ ಆಹಾರಧಾನ್ಯಗಳ ಅಂತಿಮ ಶಿಲ್ಕಿನ ವಿವರಗಳು ಅವಶ್ಯಕವಾಗಿರುತ್ತದೆ. ಆದ್ದರಿಂದ ಸಗಟುಮಳಿಗೆಯಿಂದ ನ್ಯಾಯಬೆಲೆ ಅಂಗಡಿಗಳಿಗೆ ಹಂಚಿಕೆಯಂತೆ ಸಂಪೂರ್ಣವಾಗಿ ಎತ್ತುವಳಿಯಾದ ಕೂಡಲೇ ಯಾವುದೇ ಹೆಚ್ಚುವರಿ ಹಂಚಿಕೆ ಇಲ್ಲದಿರುವುದನ್ನು ಹಾಗೂ ಭೌತಿಕವಾಗಿ ದಾಸ್ತಾನು ಲಭ್ಯವಿರುವುದನ್ನು ಖಚಿತಪಡಿಸಿಕೊಂಡು ಶೀರ್ಷಿಕೆವಾರು ಅಂತಿಮ ಶಿಲ್ಕನ್ನು ಆಹಾರ ನಿರೀಕ್ಷಕರು/ಆಹಾರ ಶಿರಸ್ತೆದಾರರು ದೃಢೀಕರಿಸಿ ಜಂಟಿ/ಉಪ ನಿರ್ದೇಶಕರು ರವರ ಕಛೇರಿಗೆ ಕಡ್ಡಾಯವಾಗಿ ಸಲ್ಲಿಸುವುದು.
8. ಸಗಟುಮಳಿಗೆಗಳಲ್ಲಿ ಸ್ವೀಕೃತಿ ಪಡೆದ ದಾಸ್ತಾನನ್ನು ಗೋದಾಮುಗಳಲ್ಲಿ ಲಭ್ಯವಿರುವ ಮರದ ಕ್ರೇಟ್ಸ್‌ಗಳ ಮೇಲೆ ದಾಸ್ತಾನಿರಿಸುವುದು. ಒಂದುವೇಳೆ ಕ್ರೇಟ್ಸ್‌ಗಳು ಲಭ್ಯವಿಲ್ಲದಿದ್ದಲ್ಲಿ ನೆಲಹಾಸು (tarpaulin) ಗಳನ್ನು ಉಪಯೋಗಿಸಿ ದಾಸಾನನ್ನು ವೈಜ್ಞಾನಿಕವಾಗಿ ಸಂಗ್ರಹಣೆ ಮಾಡುವುದು. ಒಂದು ವೇಳೆ ಬೇಜವಾಬ್ದಾರಿಯಿಂದ ಆಹಾರಧಾನ್ಯಗಳು ಹಾಳಾದಲ್ಲಿ ಸಂಬಂಧಪಟ್ಟ ಸಗಟುಮಳಿಗೆ ವ್ಯವಸ್ಥಾಪಕರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು.
9. ಪ್ರತಿ ಮಾಹೆಯ ಮೊದಲ 10-12 ದಿನದೊಳಗಾಗಿ ಆದ್ಯತೆಯ ಮೇರೆಗೆ ಸಗಟುಮಳಿಗೆಗಳಿಂದ ನ್ಯಾಯಬೆಲೆ ಅಂಗಡಿಗಳಿಗೆ ಆಹಾರಧಾನ್ಯಗಳನ್ನು ಎತ್ತುವಳಿ ಮಾಡಲು ಸಂಬಂಧಪಟ್ಟ ಆಹಾರ ನಿರೀಕ್ಷಕರು/ಶಿರಸ್ತೆದಾರರೊಂದಿಗೆ ಕ್ರಮವಹಿಸಬೇಕು. ಈ ಬಗ್ಗೆ ಜಿಲ್ಲೆಯ ಜಿಲ್ಲಾ ವ್ಯವಸ್ಥಾಪಕರು, ಜಂಟಿ/ಉಪ ನಿರ್ದೇಶಕರೊಂದಿಗೆ ಮೇಲುಸ್ತುವಾರಿ ವಹಿಸಿ ಅಗತ್ಯ ಸೂಚನೆಗಳನ್ನು ನೀಡುವುದು.
10. ಸಗಟುಮಳಿಗೆಗಳಲ್ಲಿ ಭೌತಿಕವಾಗಿ ಇರುವ ದಾಸ್ತಾನಿಗೂ ಫಿಸ್ಟ್ ತಂತ್ರಾಂಶದಲ್ಲಿನ ದಾಸ್ತಾನಿಗೂ ತಾಳೆಯಾಗುವಂತೆ ಇರಬೇಕು. ಒಂದುವೇಳೆ ದಾಸ್ತಾನು ವ್ಯತ್ಯಾಸ ಕಂಡುಬಂದಲ್ಲಿ ಸಂಬಂಧಪಟ್ಟ ಸಗಟುಮಳಿಗೆ ವ್ಯವಸ್ಥಾಪಕರನ್ನು ನೇರ ಹೊಣೆಗಾರರನ್ನಾಗಿ ಮಾಡಿ ಕ್ರಮ ಜರುಗಿಸಲಾಗುವುದು. ಈ ಬಗ್ಗೆ ಆಹಾರ ನಿರೀಕ್ಷಕರು/ ಆಹಾರ ಶಿರಸ್ತೆದಾರರು, ಜಿಲ್ಲಾ ವ್ಯವಸ್ಥಾಪಕರು, ಕಆನಾಸನಿನಿ ಮತ್ತು ಜಂಟಿ/ ಉಪನಿರ್ದೇಶಕರು ಕಾಲ ಕಾಲಕ್ಕೆ ಸಗಟುಮಳಿಗೆಗಳಿಗೆ ಭೇಟಿ ನೀಡಿ ದಾಸ್ತಾನು ಭೌತಿಕ ತಪಾಸಣೆ ನಡೆಸುವುದು. ಒಂದುವೇಳೆ ಭೌತಿಕ ತಪಾಸಣೆ ಮಾಡದೇ ಬೇಜವಾಬ್ದಾರಿ ಪ್ರದರ್ಶಿಸಿರುವುದು ಕಂಡುಬಂದಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ಕರ್ತವ್ಯ ಲೋಪವೆಂದು ಪರಿಗಣಿಸಿ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

Ph.080-2209 6555 / 2209 6512
E-mail: kfcscproc123@yahoo.com

# ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ

## Karnataka Food & Civil Supplies Corporation Ltd.
## (Government of Karnataka Undertaking)

ನಂ. 16/ಐ. ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು- 560 052
No.16 / I, MILLERS TANK BED AREA, BANGALORE-560 052



11. ಸಗಟುಮಳಿಗೆಗಳಿಂದ ಆಹಾರಧಾನ್ಯಗಳನ್ನು ಎತ್ತುವಳಿ ಮಾಡಲು ಸಂಬಂಧಪಟ್ಟ ನ್ಯಾಯಬೆಲೆ ಅಂಗಡಿ ಮಾಲೀಕರು/ಅಧಿಕೃತ ಪ್ರತಿನಿಧಿ ಸಗಟುಮಳಿಗೆಗೆ ಖುದ್ದಾಗಿ ಭೇಟಿ ನೀಡಿ ಹಂಚಿಕೆ ಅನುಸಾರ ಸಗಟುಮಳಿಗೆ ವ್ಯವಸ್ಥಾಪಕರಿಂದ ಬಿಲ್ಲನ್ನು(stock invoice) ಪಡೆದು ಮತ್ತು ಆಹಾರ ನಿರೀಕ್ಷಕರು ರವರ ಸಹಿಯೊಂದಿಗೆ ಬಿಲ್ಲನ್ನು ಪಡೆದು ನಿಗಧಿಪಡಿಸಿದ route map ಪ್ರಕಾರ ಅಧಿಕೃತ ಚಿಲ್ಲರೆ ಸಾಗಾಣಿಕೆ ಗುತ್ತಿಗೆದಾರರ ಮುಖಾಂತರ ಆಹಾರಧಾನ್ಯಗಳನ್ನು ಎತ್ತುವಳಿ ಮಾಡಿ ನ್ಯಾಯಬೆಲೆ ಅಂಗಡಿಯಲ್ಲಿ ಅನ್‌ಲೋಡ್ ಮಾಡಿದಮೇಲೆ ಫಿಸ್ಟ್ ತಂತ್ರಾಶದಲ್ಲಿ ಸ್ವೀಕೃತಿ ಮಾಡಿ ಸಾಗಾಣಿಕೆ ಗುತ್ತಿಗೆದಾರರಿಗೆ ಸ್ವೀಕೃತಿ ನೀಡುವುದು.
12. ನ್ಯಾಯಬೆಲೆ ಅಂಗಡಿಗಳಿಗೆ ವಿತರಣೆ ನೀಡಿದ ಪ್ರಮಾಣಕ್ಕೆ ಮಾತ್ರ ಫಿಸ್ಟ್ ತಂತ್ರಾಂಶದಲ್ಲಿ ಬಿಲ್ಲನ್ನು ದಾಖಲಿಸುವುದು ಹಾಗೂ ಬಿಲ್ಲನ್ನು ದಾಖಲಿಸಿದ ಪ್ರಮಾಣವನ್ನು ಕಡ್ಡಾಯವಾಗಿ ನ್ಯಾಯಬೆಲೆ ಅಂಗಡಿದಾರರು ಅಂದೇ ಎತ್ತುವಳಿ ಮಾಡುವಂತೆ ಸಂಬಂಧಪಟ್ಟ ಸಗಟುಮಳಿಗೆ ವ್ಯವಸ್ಥಾಪಕರು ಕ್ರಮವಹಿಸುವುದು.
13. ನ್ಯಾಯಬೆಲೆ ಅಂಗಡಿಗಳಿಗೆ ಎತ್ತುವಳಿ ಮಾಡುವ ಸಂದರ್ಭದಲ್ಲಿ ಸಂಬಂಧಪಟ್ಟ ಆಹಾರ ನಿರೀಕ್ಷಕರು/ ಆಹಾರ ಶಿರಸ್ತೆದಾರರು ರವರು ಸಗಟು ಮಳಿಗೆಯಲ್ಲಿ ಹಾಜರಿದ್ದು, route map ಅನುಸಾರ ಎತ್ತುವಳಿಗೆ ಕ್ರಮವಹಿಸುವುದು ಹಾಗೂ ನ್ಯಾಯಬೆಲೆ ಅಂಗಡಿಗಳಿಗೆ ವಿತರಣೆ ನೀಡಿದ ಬಿಲ್ಲುಗಳನ್ನು ಸಗಟುಮಳಿಗೆ ವ್ಯವಸ್ಥಾಪಕರೊಂದಿಗೆ ರುಜು ಮಾಡುವುದು ಕಡ್ಡಾಯವಾಗಿರುತ್ತದೆ.
14. ಯಾವುದೇ ಕಾರಣಕ್ಕೂ ಫಿಸ್ಟ್ ತಂತ್ರಾಂಶದಲ್ಲಿ ಬಿಲ್ಲನ್ನು ದಾಖಲೆ ಮಾಡದೇ ದಾಸ್ತಾನು ವಿತರಣೆ ಮಾಡುವಂತಿಲ್ಲ. ಅನಿವಾರ್ಯ ಸಂದರ್ಭಗಳಲ್ಲಿ ಸಂಬಧಪಟ್ಟ ಜಂಟಿ/ಉಪ ನಿರ್ದೇಶರು ರವರಿಂದ ಲಿಖಿತವಾಗಿ ಅನುಮತಿ ಪಡೆದು ಮ್ಯಾನುಯಲ್ ಬಿಲ್ಲನ್ನು ಹಾಕಿ ದಾಸ್ತಾನು ವಿತರಣೆ ಮಾಡುವುದು.
15. ಭಾರತ ಆಹಾರ ನಿಗಮ ಮತ್ತು ಇತರ ಉಗ್ರಾಣಗಳಿಂದ ಎತ್ತುವಳಿ ಮಾಡಿದ ಆಹಾರಧಾನ್ಯಗಳನ್ನು ಕಡ್ಡಾಯವಾಗಿ ಸಂಬಂಧಪಟ್ಟ ಸಗಟುಮಳಿಗೆಗಳಲ್ಲೇ ಅನ್‌ಲೋಡ್ ಮಾಡುವುದು. ಯಾವುದೇ ಕಾರಣಕ್ಕೂ ನೇರವಾಗಿ ವಾಹನಗಳನ್ನು ನ್ಯಾಯಬೆಲೆ ಅಂಗಡಿಗಳಿಗೆ ಮಾರ್ಗ ಬದಲಾವಣೆ ಮಾಡತಕ್ಕದ್ದಲ್ಲ. ಈ ಬಗ್ಗೆ ಸಂಬಧಪಟ್ಟ ಆಹಾರ ನಿರೀಕ್ಷಕರು/ಆಹಾರ ಶಿರಸ್ತೆದಾರರು ರವರು ಗಮನಹರಿಸುವುದು ಹಾಗೂ ಜಿಲ್ಲಾ ವ್ಯವಸ್ಥಾಪಕರು & ಜಂಟಿ/ಉಪ ನಿರ್ದೇಶಕರವರು ಮೇಲುಸ್ತುವಾರಿ ವಹಿಸುವುದು.
16. ಪ್ರತಿ ದಿನ ಸಗಟುಮಳಿಗೆಗಳಿಗೆ ಸ್ವೀಕೃತಿಯಾಗುವ ಮತ್ತು ಸಗಟುಮಳಿಗೆಯಿಂದ ವಿತರಣೆಯಾಗುವ ಆಹಾರಧಾನ್ಯಗಳ ವಿವರಗಳನ್ನು ಟ್ರಕ್‌ವಾರು ಮಾಹಿತಿಯನ್ನು ಪ್ರತ್ಯೇಕ ವಹಿಗಳಲ್ಲಿ ನಿರ್ವಹಿಸುವುದು.
17. ಸಗಟುಮಳಿಗೆಗಳಿಗೆ ಆಹಾರಧಾನ್ಯಗಳನ್ನು ಹೊತ್ತು ತರುವ ವಾಹನಗಳನ್ನು ಅನಗತ್ಯವಾಗಿ ವಿಳಂಬ ಮಾಡದೇ ತುರ್ತಾಗಿ ಅನ್‌ಲೋಡ್ ಮಾಡಿಸತಕ್ಕದ್ದು. ಒಂದುವೇಳೆ ಹಮಾಲಿಗಳ ಸಮಸ್ಯೆ /ಕೊರತೆ ಇದ್ದಲ್ಲಿ ಸಂಬಂಧಪಟ್ಟ ಸಾಗಾಣಿಕೆ ಗುತ್ತಿಗೆದಾರರು ಕ್ರಮವಹಿಸದ ಪಕ್ಷದಲ್ಲಿ ಮಾಹಿತಿಯನ್ನು ಲಿಖಿತವಾಗಿ ಜಿಲ್ಲಾ ವ್ಯವಸ್ಥಾಪಕರು ಹಾಗೂ ಜಂಟಿ/ಉಪ ನಿರ್ದೇಶಕರ ಗಮನಕ್ಕೆ ತರುವುದು.

Ph.080-2209 6555 / 2209 6512
E-mail: kfcscproc123@yahoo.com

# ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ

**Karnataka Food & Civil Supplies Corporation Ltd.**
**(Government of Karnataka Undertaking)**

ನಂ. 16/ಐ. ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ. ವಸಂತನಗರ, ಬೆಂಗಳೂರು- 560 052
No.16 / I, MILLERS TANK BED AREA, BANGALORE-560 052



18. ಅಗತ್ಯ ವಸ್ತುಗಳ ಕಾಯ್ದೆ ವಿವಿಧ ಪ್ರಕರಣಗಳಡಿ ವಶಪಡಿಸಿಕೊಂಡಿರುವ ಆಹಾರಧಾನ್ಯಗಳ ಗುಣಮಟ್ಟವು ಹಾಳಾಗುವುದನ್ನು ತಡೆಯಲು ತ್ವರಿತವಾಗಿ ವಿಲೇವಾರಿ ಮಾಡಬೇಕಾಗಿರುತ್ತದೆ. ಈ ಕುರಿತು ಜಿಲ್ಲಾ ವ್ಯವಸ್ಥಾಪಕರ ಮುಖಾಂತರ ಲಭ್ಯವಿರುವ ಜಪ್ತಾದ ದಾಸ್ತಾನಿನ ಬಗ್ಗೆ ಜಂಟಿ/ಉಪ ನಿರ್ದೇಶಕರಿಗೆ ಲಿಖಿತ ಮಾಹಿತಿ ನೀಡಿ ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆದು ನಿಯಮಾನುಸಾರ ವಿಲೇವಾರಿಗೆ ಕ್ರಮವಹಿಸುವುದು. ಒಂದುವೇಳೆ ಬೇಜವಾಬ್ದಾರಿಯಿಂದ ದಾಸ್ತಾನು ಹಾಳಾದಲ್ಲಿ ಸಂಬಂಧಪಟ್ಟವರನ್ನು ನೇರ ಹೊಣೆಗಾರರನ್ನಾಗಿ ಮಾಡಿ ಕ್ರಮ ಜರುಗಿಸಲಾಗುವುದು.
19. ಸಗಟು ಮಳಿಗೆ ಮತ್ತು ನ್ಯಾಯಬೆಲೆ ಅಂಗಡಿಗಳಲ್ಲಿ ದಾಸ್ತಾನನ್ನು ಕಡ್ಡಾಯವಾಗಿ FIRST IN FIRST OUT (FIFO) ಆಧಾರದ ಮೇಲೆ ವಿತರಣೆ ಮಾಡತಕ್ಕದ್ದು. ಯಾವುದೇ ಕಾರಣಕ್ಕೂ ಧೀರ್ಘಾವಧಿಯವರೆಗೆ ದಾಸ್ತಾನಿರಿಸಿ ಆಹಾರಧಾನ್ಯಗಳು ಹಾಳಾಗಲು ಅವಕಾಶ ನೀಡಬಾರದು. ಈ ಬಗ್ಗೆ ಭೌತಿಕ ದಾಸ್ತಾನು ತಪಾಸಣೆ ಸಮಯದಲ್ಲಿ ಪರಿಶೀಲಿಸಿ ಸಂಬಧಪಟ್ಟವರಿಗೆ ಅಗತ್ಯ ಸೂಚನೆಗಳನ್ನು ನೀಡುವುದು.
20. ಸಗಟು ಮಳಿಗೆಯಲ್ಲಿ ದಾಸ್ತಾನಿರುವ ಆಹಾರಧಾನ್ಯಗಳ ಗುಣಮಟ್ಟವನ್ನು ಕಾಯ್ದುಕೊಳ್ಳುವುದು ಸಗಟು ಮಳಿಗೆ ನಿರ್ವಾಹಕರ ಆದ್ಯ ಕರ್ತವ್ಯವಾಗಿರುತ್ತದೆ. ಆದುದರಿಂದ ಕಾಲಕಾಲಕ್ಕೆ ಧೂಮೋಪಚಾರ ಮಾಡಿ ಗುಣಮಟ್ಟದ ಆಹಾರಧಾನ್ಯಗಳನ್ನು ಮಾತ್ರ ಪಡಿತರ ಚೀಟಿದಾರರಿಗೆ ವಿತರಿಸಲು ಕ್ರಮವಹಿಸುವುದು.

ಮೇಲಿನ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿಕೊಂಡು ನಿಗಮದ ಅಧಿಕಾರಿ/ಸಿಬ್ಬಂದಿಗಳು ಸರ್ಕಾರದ ಯೋಜನೆಗಳನ್ನು ಯಶಸ್ವಿಯಾಗಿ ನಿರ್ವಹಿಸುವಂತೆ ಸೂಚಿಸಿದೆ.

4/3/25

ವ್ಯವಸ್ಥಾಪಕ ನಿರ್ದೇಶಕರು
ಕ.ಆ.ನಾ.ಸ.ನಿ.ನಿ

ಗೆ,

- ಎಲ್ಲಾ ಜಿಲ್ಲಾ ವ್ಯವಸ್ಥಾಪಕರು, ಕ.ಆ.ನಾ.ಸ.ನಿ.ನಿ. ಇವರ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.
- ಎಲ್ಲಾ ಸಗಟು ಮಳಿಗೆ ವ್ಯವಸ್ಥಾಕರು, ಕ.ಆ.ನಾ.ಸ.ನಿ.ನಿ. (ಸಂಬಂಧಪಟ್ಟ ಜಿಲ್ಲಾ ವ್ಯವಸ್ಥಾಪಕರ ಮುಖಾಂತರ) ಇವರ ಅಗತ್ಯ ಕ್ರಮಕ್ಕಾಗಿ.

ಪ್ರತಿಯನ್ನು ಮಾಹಿತಿಗಾಗಿ:

- ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು
- ಆಯುಕ್ತರು, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು